REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 29 | ಸಂಚಿಕೆ : 42 | ಜನವರಿ 25, 2023 | ಬುಧವಾರ | ಪುಟಗಳು : 8 | ಬೆಲೆ : 2/-




## ಫೆಬ್ರುವರಿ 10 ರಿಂದ ವಿಧಾನಮಂಡಲ ಅಧಿವೇಶನ : 17ಕ್ಕೆ ರಾಜ್ಯ ಬಜೆಟ್


**ಬೆಂಗಳೂರು :** ಫೆಬ್ರುವರಿ 10ರಂದು ವಿಧಾನಮಂಡಲದ ಪ್ರಸಕ್ತ ವರ್ಷದ ಬಜೆಟ್ ಅಧಿವೇಶನ ನಡೆಸಲು ನಡೆದ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ಫೆ. 10ರಂದು ರಾಜ್ಯಪಾಲರು ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಫೆ. 16ರವರೆಗೂ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಲಿದೆ. ಫೆ.17ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಜೆಟ್ ಮಂಡಿಸುವ ಸಾಧ್ಯತೆ ಇದೆ' ಎಂದರು. ಅಧಿವೇಶನದ ಕೊನೆಯ ದಿನವನ್ನು ನಿರ್ಧರಿಸಿಲ್ಲ. ವಿಧಾನಮಂಡಲದ ಉಭಯ ಸದನಗಳ ಕಲಾಪ ಸಲಹಾ ಸಮಿತಿಗಳ ಸಭೆ ನಡೆಸಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

## ಮಹಾಮಂಡಳಕ್ಕೆ ದಿನಾಂಕ : 16.01.2023ರಂದು ಪ್ರೋಬೇಷನರಿ ಸೇವೆಯಲ್ಲಿರುವ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳ ಭೇಟಿ



ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳಕ್ಕೆ ಸಹಕಾರ ಇಲಾಖೆಗೆ ಹೊಸದಾಗಿ ನೇಮಕಾತಿಗೊಂಡು ಪ್ರೋಬೇಷನರಿ ಸೇವೆಯಲ್ಲಿರುವ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು ದಿನಾಂಕ : 16.01.2023ರಂದು ಮಹಾಮಂಡಳಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಮತ್ತು ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳಾದ ಶ್ರೀ ಬಿ.ಆರ್. ಬಾಬು ರೆಡ್ಡಿರವರು ಪರೀಕ್ಷಾರ್ಥ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ ಸಾಲ ವಸೂಲಾತಿ ವಿಚಾರವಾಗಿ ತಿಳಿಸಿಕೊಟ್ಟರು.

2 ಚಿನ್ನದ ಇಟಿಎಫ್ : 2022ರಲ್ಲಿ ಹೂಡಿಕೆ ಶೇ.90ರಷ್ಟು ಕುಸಿತ
4 2023ರ ಬಜೆಟ್‌ನಲ್ಲಿ ಬೆಟ್ಟದಷ್ಟು ನಿರೀಕ್ಷೆ : ಯಾರಿಗೆ ಏನು ಸಿಗಬಹುದು?
7 ನಿಮ್ಮ ಪ್ರಶ್ನೆ ನಮ್ಮ ಉತ್ತರ



## ಆತ್ಮೀಯ ಸಹಕಾರಿಗಳೇ...

# ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿ ಸಹಕಾರ ಸಮೃದ್ಧಿಯಾಗಲಿ

ಇತ್ತೀಚೆಗೆ ರಾಷ್ಟ್ರಮಟ್ಟದ 3 ಬೃಹತ್ ಸಹಕಾರ ಸಂಸ್ಥೆಗಳ ಸ್ಥಾಪನೆಗೆ ಕೇಂದ್ರ ಸಚಿವ ಸಂಪುಟದ ಒಪ್ಪಿಗೆ ನೀಡಿರುವುದಾಗಿ ವರದಿಯಾಗಿದೆ. ಬಹುರಾಜ್ಯ ಸಾವಯವ ಸಹಕಾರ ಸಂಸ್ಥೆ, ಬಹುರಾಜ್ಯ ಸಹಕಾರ ರಫ್ತು ಸಂಸ್ಥೆ, ಬಹುರಾಜ್ಯ ಬೀಜ ಸಹಕಾರ ಸಂಸ್ಥೆ ಹೆಸರಿನಲ್ಲಿ ಮೂರು ಸಹಕಾರ ಸಂಸ್ಥೆಗಳು ಮುಂದಿನ ದಿನಗಳಲ್ಲಿ ಅಸ್ತಿತ್ವಕ್ಕೆ ಬರಲಿವೆ.

ಸಹಕಾರ ಸಂಘಗಳ ಬಲವರ್ಧನೆಯಾಗಬೇಕು ಹಾಗೂ ಅವುಗಳು ಯಶಸ್ವಿಯಾಗಿ ಹೊರಹೊಮ್ಮಬೇಕಿದೆ. ಸಹಕಾರ ಸಂಘಗಳು ಜಾಗತಿಕವಾಗಿ ಚಿಂತಿಸುವ ಹಾಗೂ ಸ್ಥಳೀಯವಾಗಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯವನ್ನು ಪಡೆದುಕೊಳ್ಳಬೇಕೆನ್ನುವುದು ನಿಜ. ಆದರೆ, ಇದೆಲ್ಲವೂ ಸಹಕಾರ ತತ್ವದಡಿಯಲ್ಲಿ ಆಗಬೇಕಿದೆಯೇ ಹೊರತು, ಕಾರ್ಪೋರೇಟ್ ಉದ್ಯಮದ ರೀತಿಯಲ್ಲ ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ. ಕಾರಣ; ಇವುಗಳನ್ನು 2002ರ ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆಯ ಅಡಿಯಲ್ಲಿ ಸ್ಥಾಪಿಸುವ ನಿರ್ಧಾರ ನನ್ನಲ್ಲಿ ಆಂತಕ ಉಂಟುಮಾಡಿದೆ. ಇತ್ತೀಚೆಗೆ ನಮ್ಮ ಕಾರ್ಯಕ್ರಮವೊಂದರಲ್ಲಿ ಅಮಿತ್ ಶಾರವರು ನಮ್ಮ ಕರ್ನಾಟಕದ ಅಸ್ಮಿತೆಯಾಗಿರುವ ನಂದಿನಿ ಹಾಗೂ ಗುಜರಾತಿನ ಅಮುಲ್‌ನಲ್ಲಿ ವಿಲೀನಗೊಳಿಸುವ ಅರ್ಥದಲ್ಲಿ ಮಾತನಾಡಿದ ಬಗ್ಗೆ ವರದಿಗಳಿವೆ. ಈ ಹೇಳಿಕೆಗೆ ನಮ್ಮ ರಾಜ್ಯದಾದ್ಯಂತ ತೀವ್ರ ಆಕ್ಷೇಪವೂ ವ್ಯಕ್ತವಾಗಿರುವುದು ಸಧ್ಯದ ಮಟ್ಟಿಗೆ ಸಮಾಧಾನಕರ ವಿಷಯವಾಗಿದೆ.

ಇದನ್ನು ಇಲ್ಲಿ ಪ್ರಸ್ತಾಪಿಸಲು ಕಾರಣ; ಕೆಲವೇ ವರ್ಷಗಳ ಹಿಂದೆ ನಮ್ಮ ರಾಜ್ಯದ ಹೆಮ್ಮೆಯ ಮೈಸೂರು ಬ್ಯಾಂಕ್ ಮತ್ತು ವಿಜಯ ಬ್ಯಾಂಕುಗಳನ್ನು ಎಸ್.ಬಿ.ಐ., ಬರೋಡ ಬ್ಯಾಂಕುಗಳಲ್ಲಿ ವಿಲೀನಗೊಳಿಸಿದಾಗ ನಮ್ಮಲ್ಲಿ ಯಾವುದೇ ಪ್ರತಿರೋಧ ಕಂಡು ಬರಲಿಲ್ಲ.

ಅದರಲ್ಲೂ ದೇಶದಲ್ಲೇ ಲಾಭದಲ್ಲಿ ಎರಡನೇ ಸ್ಥಾನದಲ್ಲಿದ್ದ ವಿಜಯಾ ಬ್ಯಾಂಕ್ ಅನ್ನು ಅಪಾರ ನಷ್ಟದಲ್ಲಿದ್ದ ಬರೋಡ ಬ್ಯಾಂಕಿನಲ್ಲಿ ವಿಲೀನಗೊಳಿಸಿದ ರೀತಿಯಂತು ಅರ್ಥವಿಲ್ಲದ ನಡೆಯಾಗಿತ್ತು. ಬದಲಿಗೆ ಬರೋಡ ಬ್ಯಾಂಕ್ ಅನ್ನು ವಿಜಯಾ ಬ್ಯಾಂಕಿನಲ್ಲಿ ವಿಲೀನಗೊಳಿಸಿದ್ದರೆ ಅದನ್ನು ಒಪ್ಪಬಹುದಾಗಿತ್ತು. ಇದು ನನ್ನಲ್ಲಿ ಆಘಾತ ಉಂಟುಮಾಡಿತ್ತು.

ಕೇಂದ್ರ ಸಹಕಾರ ಸಚಿವರು ಇಲ್ಲಿ ಅರ್ಥ ಮಾಡಿಕೊಳ್ಳಬೇಕಿರುವುದು, ಗ್ರಾಮೀಣಾಭಿವೃದ್ಧಿಯಲ್ಲಿ ನಮ್ಮ ಸಹಕಾರ ಸಂಘಗಳ ಪಾತ್ರ ಮಹತ್ವದ್ದಾಗಿದೆ ಎನ್ನುವುದನ್ನು. ಮೊದಲು ರೈತ, ತನ್ನ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವಂತ ವ್ಯವಸ್ಥೆಯನ್ನು ಬಲಪಡಿಸುವುದು. ಇದರಿಂದ ಗ್ರಾಹಕರಿಗೂ ಲಾಭ ರೈತನಿಗೂ ಲಾಭವಾಗಲಿದೆ. ರೈತರು ತಮ್ಮ ಉತ್ಪನ್ನಗಳನ್ನು ನೇರ ಗ್ರಾಹಕರಿಗೆ ಮಾರಾಟ ಮಾಡುವ ವ್ಯವಸ್ಥೆಯನ್ನು ರೂಪಿಸುವುದು. ಅದಕ್ಕಾಗಿ ಅವರು ಕಾನೂನಾತ್ಮಕವಾಗಿ ತಮ್ಮದೇ ಆದ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಳ್ಳಲು ಆ ಮೂಲಕ ಅವರು ಬೆಳೆಯುವ ಕೃಷಿ ಉತ್ಪನ್ನಗಳನ್ನು ಒಂದು ಬ್ರ್ಯಾಂಡ್ ಹೆಸರಿನಲ್ಲಿ ಮಾರಾಟ ಮಾಡುವಂತ, ತಮ್ಮ ಕೃಷಿ ಚಟುವಟಿಕೆಗೆ ಅಗತ್ಯವಿರುವ ಗೊಬ್ಬರ, ಕೀಟನಾಶಕ, ಕೃಷಿ ಉಪಕರಣಗಳನ್ನು ತಯಾರಕರಿಂದಲೇ ನೇರವಾಗಿ ಖರೀದಿಸಬಹುದಾದಂಥ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯವಿದೆ.

ಇದಕ್ಕೆ ನಮ್ಮ ಉದಾಹರಣೆಯಾಗಿ ನಂದಿನಿ ಬ್ರ್ಯಾಂಡ್ ನಮ್ಮ ಕಣ್ಣ ಮುಂದಿರುವುದನ್ನು ಕೇಂದ್ರ ಸಹಕಾರ ಸಚಿವರು ಗಮನಿಸಲಿ. ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರದ ಮಹತ್ವದ ಘೋಷಣೆಯಾದ ಸಹಕಾರದಿಂದ ಸಮೃದ್ಧಿಯೂ ಸಾಕಾರಗೊಳ್ಳಲಿ ಎಂದು ಆಶೀಸುತ್ತೇನೆ.

ಎಚ್.ಕೆ. ಪಾಟೀಲ
ಅಧ್ಯಕ್ಷರು

## ಚಿನ್ನದ ಇಟಿಎಫ್ : 2022ರಲ್ಲಿ ಹೂಡಿಕೆ ಶೇ.90ರಷ್ಟು ಕುಸಿತ

**ನವದೆಹಲಿ :** ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಬಂಡವಾಳ ಹೂಡಿಕೆಯು 2021ಕ್ಕೆ ಹೋಲಿಸಿದರೆ 2022ರಲ್ಲಿ ಶೇ.90ರಷ್ಟು ಕುಸಿತ ಕಂಡಿದೆ.

2021ರಲ್ಲಿ ಹೂಡಿಕೆಯು 74,814 ಕೋಟಿಯಷ್ಟು ಆಗಿತ್ತು. ಇದು 2022ರಲ್ಲಿ 7459 ಕೋಟಿಗೆ ಇಳಿಕೆ ಕಂಡಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮಾಹಿತಿ ನೀಡಿದೆ.

ಚಿನ್ನದ ದರ ಏರಿಕೆ ಆಗಿರುವುದು ಹಾಗೂ ಹಣದುಬ್ಬರದ ಒತ್ತಡದಿಂದಾಗಿ ಹಲವು ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಹೆಚ್ಚಳ ಮಾಡಿರುವ ಕಾರಣಗಳಿಂದಾಗಿ ಒಳಹರಿವು ಭಾರಿ ಪ್ರಮಾಣದಲ್ಲಿ ಕಡಿಮೆ ಆಗಿದೆ ಎಂದು ಅದು ಹೇಳಿದೆ. ಚಿನ್ನದ ದರ ಹೆಚ್ಚಳವು ಹೂಡಿಕೆದಾರರ ಮೇಲೆ ಒಂದಿಷ್ಟು ಒತ್ತಡ ಉಂಟುಮಾಡಿದೆ. ಬಹಳಷ್ಟು ಮಂದಿ ಹೂಡಿಕೆದಾರರು ಚಿನ್ನದ ದರ ಕಡಿಮೆ ಆಗುವುದಕ್ಕೆ ಕಾಯಲು ಮುಂದಾಗಿದ್ದು, ಹೂಡಿಕೆಯಿಂದ ಹಿಂದೆ ಸರಿದಿದ್ದಾರೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಹಿರಿಯ ವಿಶ್ಲೇಷಕಿ ಕವಿತಾ ಕೃಷ್ಣನ್ ಹೇಳಿದ್ದಾರೆ.

ದೇಶಿ ಮಟ್ಟದಲ್ಲಿ, ಹೂಡಿಕೆದಾರರು 2022ರಲ್ಲಿ ಷೇರುಗಳ ಖರೀದಿ ಮೇಲೆ ಹೆಚ್ಚಿನ ಬಂಡವಾಳ ತೊಡಗಿಸಿದ್ದಾರೆ. 71.6 ಲಕ್ಷ ಕೋಟಿ ಮೊತ್ತದ ಷೇರುಗಳನ್ನು ಖರೀದಿಸಿದ್ದಾರೆ. 2021ರಲ್ಲಿ ಷೇರುಗಳ ಮೇಲಿನ ಹೂಡಿಕೆಯು 196,700 ಕೋಟಿಯಷ್ಟು ಇತ್ತು. ವ್ಯವಸ್ಥಿತ ಹೂಡಿಕೆಯ ಯೋಜನೆಗಳ (ಎಸ್‌ಐಪಿ) ಮೇಲೆಯೂ ಹೂಡಿಕೆ ಹೆಚ್ಚಾಗುತ್ತಿದೆ.

ರಷ್ಯಾ–ಉಕ್ರೇನ್ ಸಮರದ ಸುತ್ತಲಿನ ಅನಿಶ್ಚಿತತೆ ಮತ್ತು ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್‌ನ ಬಿಗಿಯಾದ ಹಣಕಾಸು ನಿಲುವು ಸೇರಿದಂತೆ ಇನ್ನೂ ಹಲವು ಅಂಶಗಳು ದಾಖಲೆ ಪ್ರಮಾಣದಲ್ಲಿ ಬಂಡವಾಳ ಹೊರಹರಿವಿಗೆ ಕಾರಣವಾಗಿವೆ ಎಂದು ಕೃಷ್ಣನ್ ತಿಳಿಸಿದ್ದಾರೆ.

## ದಿನಾಂಕ : 28.01.2023ರಂದು ಮಂಗಳೂರಿನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ವಿಶ್ವಕರ್ಮ ಸಹಕಾರ ಬ್ಯಾಂಕ್ ಲಿ. ಮಂಗಳೂರು ಇವರ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ದಿನಾಂಕ : 28.01.2023 ರಂದು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಲಿ., ಉತ್ಕೃಷ್ಟ ಸಭಾ ಭವನ, ಕೊಡಿಯಾಲ್ ಬೈಲ್, ಮಂಗಳೂರು–575003. ಇಲ್ಲಿ ಏರ್ಪಡಿಸಲಾಗಿದೆ.

ಈ ವಿಚಾರ ಸಂಕಿರಣದಲ್ಲಿ "ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಕಲಂಗಳು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಮುಖ ಕಾಯ್ದೆ ಕಲಂ ಮತ್ತು ನಿಯಮಗಳು, ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ನಿರ್ದೇಶಕ ಮಂಡಳಿಯ ಪಾತ್ರ, ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಬ್ಯಾಂಕಿಂಗೇತರ ಆದಾಯಗಳನ್ನು ಹೆಚ್ಚಿಸುವ ಕ್ರಮಗಳು, ಡಿಜಿಟಲ್ ಬ್ಯಾಂಕಿಂಗ್ ಅಳವಡಿಕೆಯಿಂದ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಆಗುವ ಲಾಭ ವಿಷಯಗಳ ಕುರಿತಾಗಿ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಸದರಿ ವಿಚಾರ ಸಂಕಿರಣವನ್ನು ನೋಂದಣಿ ಹಾಗೂ ಉಪಹಾರದೊಂದಿಗೆ ದಿನಾಂಕ : 28.01.2023 ರಂದು ಬೆಳಿಗ್ಗೆ 08.30 ಗಂಟೆಗೆ ಪ್ರಾರಂಭಿಸಲಾಗುವುದು.

ಈ ವಿಚಾರ ಸಂಕಿರಣಕ್ಕೆ ತಮ್ಮ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರು ಭಾಗವಹಿಸಿ, ಈ ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ. ದಿನಾಂಕ : 25.01.2023 ರೊಳಗಾಗಿ ವ್ಯವಸ್ಥೆಯ ದೃಷ್ಟಿಯಿಂದ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ತಿಳಿಸಿರುತ್ತಾರೆ.


## ಸಹಕಾರಿ ಧುರೀಣ, ಮಾಜಿ ಶಾಸಕ ಎಲ್.ಟಿ. ತಿಮ್ಮಪ್ಪ ಹೆಗಡೆ ನಿಧನ



**ಸಾಗರ :** ಮಲೆನಾಡಿನ ಹಿರಿಯ ರಾಜಕಾರಣಿ, ಹತ್ತಾರು ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ ಸಹಕಾರಿ ಧುರೀಣ, ಮಾಜಿ ಶಾಸಕ ಎಲ್.ಟಿ. ತಿಮ್ಮಪ್ಪ ಹೆಗಡೆ (94) ದಿನಾಂಕ : 17.01.2023ರಂದು ನಿಧನರಾದರು. ಸಾಗರ ಪ್ರಾಂತ್ಯ ಅಡಕೆ ಬೆಳೆಗಾರರ ಸಂಘ ಸ್ಥಾಪನೆ ಸೇರಿದಂತೆ ಅಂತರ ರಾಜ್ಯ ವಹಿವಾಟು ಸಂಸ್ಥೆ ಕ್ಯಾಂಪ್ಕೋ, ಸಾಗರದ ಆಪ್ಸ್ ಕೋಸ್‌ನಂತಹ ಸಂಸ್ಥೆಗಳನ್ನು ಹುಟ್ಟು ಹಾಕುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದ್ದರು. ಸಾಗರದ ಆಪ್ಸ್‌ಕೋಸ್, ತೋಟಗಾರ್ಸ್, ಅಡಕೆ ಬೆಳೆಗಾರರ ಸಂಘಗಳ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಹೆಗಡೆ ಅವರು ಕ್ಯಾಂಪ್ಕೋ ಸಂಸ್ಥಾಪಕ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು.

ದಕ್ಷಿಣ ಕನ್ನಡದ ಹಟ್ಟಿಯಂಗಡಿಯ ಸಿದ್ಧಿವಿನಾಯಕ ಕ್ಷೇತ್ರಾಭಿವೃದ್ಧಿ ಟ್ರಸ್ಟ್ ಹಾಗೂ ಸಿದ್ಧಿ ಶಿಕ್ಷಣ ಪ್ರತಿಷ್ಠಾನ ಸಂಸ್ಥೆಗಳ ಸ್ಥಾಪಕ ಅಧ್ಯಕ್ಷರಾಗಿದ್ದರು. ಸಾಗರದ ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನದ ಉಪಾಧ್ಯಕ್ಷರಾಗಿ ಬಹುಕಾಲ ಸೇವೆ ಸಲ್ಲಿಸಿದ್ದ ಹೆಗಡೆ ಅವರು, ಎಲ್‌ಬಿ ಕಾಲೇಜು, ಪ್ರಗತಿ ಸಂಯುಕ್ತ ಶಾಲೆ ಸ್ಥಾಪನೆಯಲ್ಲಿ ಮುಂಚೂಣಿಯಲ್ಲಿದ್ದರು. ಎಲ್.ಟಿ. ತಿಮ್ಮಪ್ಪ ಹೆಗಡೆಯವರ ನಿಧನಕ್ಕೆ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು, ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ, ಸಿಬ್ಬಂದಿ ವರ್ಗದವರು ತೀವ್ರ ಸಂತಾಪ ವ್ಯಕ್ತಪಡಿಸಿ, ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

## ಸುಸ್ಥಿತಿಗೆ ಬಂದ ಇ–ಪಾಸ್‌ಬುಕ್ : ಇಪಿಎಫ್‌ಒ




**ಬೆಂಗಳೂರು :** ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಇ–ಪಾಸ್‌ಬುಕ್ ಸೇವೆಯು ಇದೀಗ ಸರಿಯಾಗಿ ಕೆಲಸ ಮಾಡುತ್ತಿದೆ ಎಂದು ಸಂಘಟನೆಯು ಟ್ವಿಟರ್‌ಮೂಲಕ ಪ್ರತಿಕ್ರಿಯೆ ನೀಡಿದೆ. ಕಳೆದ 10 ದಿನಗಳಿಂದ ಇ–ಪಾಸ್‌ಬುಕ್ ತೆರೆಯಲು ಸಾಧ್ಯವಾಗುತ್ತಿಲ್ಲ ಎಂದು ಬಳಕೆದಾರರು ಟ್ವಿಟರ್‌ನಲ್ಲಿ ಇಪಿಎಫ್‌ಒ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರು.

ಈ ಕುರಿತು ಸಂಘಟನೆಯು ತನ್ನ ಅಧಿಕೃತ ಟ್ವಿಟರ್ ಹ್ಯಾಂಡಲ್ ಮೂಲಕ ಪ್ರತಿಕ್ರಿಯೆ ನೀಡಿದ್ದು, 'ಪಾಸ್‌ಬುಕ್ ತಾಂತ್ರಿಕ ಕಾರಣಗಳಿಂದಾಗಿ ಬಳಕೆಗೆ ಅಲಭ್ಯವಾಗಿತ್ತು. ಇದೀಗ ಸರಿಯಾಗಿ ಕೆಲಸ ಮಾಡುತ್ತಿದೆ' ಎಂದು ತಿಳಿಸಿದೆ.

# 2023ರ ಬಜೆಟ್‌ನಲ್ಲಿ ಬೆಟ್ಟದಷ್ಟು ನಿರೀಕ್ಷೆ : ಯಾರಿಗೆ ಏನು ಸಿಗಬಹುದು?

**ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್‌ಅವರು ಫೆ. 1 ರಂದು 2023-24ನೇ ಸಾಲಿನ ಬಜೆಟ್ ಮಂಡನೆ ಮಾಡಲಿದ್ದಾರೆ. ದೇಶದ ಬಡವರಿಗೆ, ಮಧ್ಯಮ ವರ್ಗದವರಿಗೆ, ಯುವ ಜನರಿಗೆ, ಸಣ್ಣ ಉದ್ದಿಮೆದಾರರಿಗೆ, ಕಾರ್ಪೊರೇಟ್ ಉದ್ಯಮಿಗಳಿಗೆ ಸಹಜವಾಗಿಯೇ ಹಲವು ನಿರೀಕ್ಷೆಗಳಿವೆ. 2024ರ ಲೋಕಸಭಾ ಚುನಾವಣೆಗೂ ಮುನ್ನ ಮಂಡನೆಯಾಗಲಿರುವ ಪೂರ್ಣ ಪ್ರಮಾಣದ ಬಜೆಟ್ ಆಗಿದ್ದರಿಂದ ಹಲವು 'ರಿಲೀಫ್'ಗಳನ್ನು ಜನ ಬಯಸಿದ್ದಾರೆ. ತೆರಿಗೆ ಕಡಿತ, ಆದಾಯ ತೆರಿಗೆ ಸ್ಲ್ಯಾಬ್ ಏರಿಕೆ, ಹಣದುಬ್ಬರ ನಿಯಂತ್ರಣಕ್ಕೆ ಕ್ರಮ, ಉದ್ಯೋಗ ಸೃಷ್ಟಿ ಮುಂತಾದ ಹಲವು ಆಕಾಂಕ್ಷೆಗಳು ಜನರಲ್ಲಿವೆ.**

**1. ವೇತನದಾರರ ತೆರಿಗೆ ಸ್ಲ್ಯಾಬ್ ಹೆಚ್ಚಳ :** ಪ್ರತೀ ಬಾರಿ ಬಜೆಟ್ ಮಂಡನೆಯ ದಿನ ಹತ್ತಿರ ಬಂದಾಗ ತೆರಿಗೆ ವಿನಾಯಿತಿ ಬಗ್ಗೆ ಕಾತುರದಿಂದ ಕಾಯುವ ವರ್ಗಗಳಲ್ಲಿ ವೇತನದಾರರು ಕೂಡ ಒಬ್ಬರು. ಮೂಲಗಳ ಪ್ರಕಾರ ಸದ್ಯ ಇರುವ ಆರಂಭಿಕ ರೂ.2.5 ಲಕ್ಷ ಸ್ಲ್ಯಾಬ್‌ಅನ್ನು ರೂ.5 ಲಕ್ಷಕ್ಕೆ ಏರಿಸುವ ನಿರೀಕ್ಷೆ ಇದೆ. ಕಳೆದ ಆರೇಳು ವರ್ಷಗಳಿಂದ ಈ ನಿರೀಕ್ಷೆ ಹುಸಿಯಾಗುತ್ತಾ ಬಂದಿದ್ದು, ಈ ಬಾರಿಯಾದರೂ ಈಡೇರಲಿದೆ ಎನ್ನುವುದು ವೇತನದಾರರ ನಿರೀಕ್ಷೆ. ಹಣದುಬ್ಬರ, ಬೆಲೆ ಏರಿಕೆ, ವೇತನ ಕಡಿತ, ಆದಾಯ ಕುಸಿತ ಇದ್ದರೂ ತೆರಿಗೆ ಸ್ಲ್ಯಾಬ್‌ಗಳಲ್ಲಿ ಬದಲಾವಣೆ ಆಗಿಲ್ಲ ಎನ್ನುವ ಅಸಮಾಧಾನ ಕೂಡ ಇದೆ. ಇದನ್ನು ಈ ಬಾರಿಯ ಬಜೆಟ್‌ನಲ್ಲಿ ಪರಿಗಣಿಸಿದರೆ ದೇಶದ ಕೋಟ್ಯಂತರ ಉದ್ಯೋಗಿಗಳಿಗೆ ಅನುಕೂಲ ಆಗಲಿದೆ. ಈಗ ಹಳೆಯ ಹಾಗೂ ಹೊಸ ತೆರಿಗೆ ಪದ್ಧತಿ ಇದ್ದರೂ, ಹಲವು ಮಂದಿ ಹಳೇ ಪದ್ಧತಿಯನ್ನೇ ಆರಿಸಿಕೊಂಡಿದ್ದಾರೆ. ಹೀಗಾಗಿ ಈ ಬಾರಿಯ ಬಜೆಟ್‌ನಲ್ಲಿ ಮಾಸಿಕ ವೇತನ ಪಡೆಯುವವರು ನೂತನ ತೆರಿಗೆ ಪದ್ಧತಿಯನ್ನು ನಿರೀಕ್ಷೆ ಮಾಡಬಹುದು.

**2. ಷೇರು ಮಾರುಕಟ್ಟೆಯ ನಿರೀಕ್ಷೆಗಳು :** ಕೋವಿಡ್ ಮೂರನೇ ಅಲೆ ಭಯ, ಜಾಗತಿಕ ಹಿಂಜರಿತದ ಭೀತಿ, ಉಕ್ರೇನ್‌ನೊಂದಿಗೆ ರಷ್ಯಾದ ಸಂಘರ್ಷ ಹೀಗೆ



ಹಲವು ಕಾರಣಗಳಿಂದ ಕಳೆದೊಂದು ವರ್ಷದಲ್ಲಿ ವಿಶ್ವದ ಷೇರು ಮಾರುಕಟ್ಟೆಗಳು ಮಂದಗತಿಯಲ್ಲಿ ಸಾಗಿವೆ. ಇದರ ಹೊರತಾಗಿಯೂ ಭಾರತದ ಷೇರು ಮಾರುಕಟ್ಟೆ ಹೆಚ್ಚಿನ ಒತ್ತಡಕ್ಕೆ ಸಿಲುಕಲಿಲ್ಲ. ಈ ನಡುವೆ ದೇಶದಲ್ಲಿ ಡಿ-ಮ್ಯಾಟ್ ಖಾತೆ ಹೊಂದಿರುವವರ ಸಂಖ್ಯೆ ಕೂಡ ಹೆಚ್ಚಳವಾಗಿದೆ ಎನ್ನುವುದು ಕೂಡ ಗಮನಾರ್ಹ.


ದೀರ್ಘಾವಧಿ ಬಂಡವಾಳ ಗಳಿಕೆ **(Long-Term Capital Gains – LTCG)** ಮೇಲೆ ಹೇರಲಾಗಿರುವ ತೆರಿಗೆಯನ್ನು ರದ್ದುಗೊಳಿಸುವ ನಿರೀಕ್ಷೆಯಲ್ಲಿ ಹೂಡಿಕೆದಾರರು ಇದ್ದಾರೆ. ಸದ್ಯ ಒಂದು ವರ್ಷಕ್ಕಿಂತ ಅಧಿಕ ಕಾಲ ಇದ್ದ ಬಂಡವಾಳದ ಮೇಲೆ ಬಂದ ಆದಾಯದ ಮೇಲೆ ಶೇ 10 ರಷ್ಟು ತೆರಿಗೆ ಇದೆ. ಇದನ್ನು ರದ್ದುಗೊಳಿಸಬೇಕು ಎಂದು ಹೂಡಿಕೆದಾರರ ನಿರೀಕ್ಷೆ ಇದೆ. ಒಂದು ವೇಳೆ ಹೀಗಾದಲ್ಲಿ ಷೇರು ಮಾರುಕಟ್ಟೆ ಇನ್ನಷ್ಟು ಬೆಳವಣಿಗೆ ಕಾಣಲಿದೆ ಎನ್ನುವುದು ತಜ್ಞರ ಅಂದಾಜು.

**3. ಕಾರ್ಪೊರೇಟ್ ಉದ್ದಿಮೆಗಳು ಬಯಸುತ್ತಿರುವುದೇನು? :** ಕಾರ್ಪೊರೇಟ್ ಉದ್ಯಮಗಳು, ಅದರಲ್ಲೂ ಸಣ್ಣ ಉದ್ದಿಮೆಗಳು ಕೋವಿಡ್ ಹೊಡೆತದಿಂದ ಇನ್ನೂ ಹೊರಬಂದಿಲ್ಲ. ಇವುಗಳ ಮೇಲೆ ಇರುವ ಮಾರುಕಟ್ಟೆ ಒತ್ತಡ ಕೂಡ ಕಡಿಮೆಯಾಗಿಲ್ಲ. ಪರಿಣಾಮ ಈ ಆರ್ಥಿಕ ವರ್ಷದಲ್ಲಿ ಅವುಗಳ ಬೆಳವಣಿಗೆ ಕೂಡ ಭಾರೀ ಪ್ರಮಾಣದಲ್ಲಿ ಆಗಿಲ್ಲ. ಹೀಗಾಗಿ ಈ ವಲಯ ಕೂಡ ಹಲವು ನಿರೀಕ್ಷೆಯೊಂದಿಗೆ ಈ ಬಾರಿಯ ಬಜೆಟ್ ಅನ್ನು ಎದುರು ನೋಡುತ್ತಿದೆ.

ಸದ್ಯ ವಿವಿಧ ಸ್ತರದ ಕೈಗಾರಿಕೆಗಳಿಗೆ ವಿವಿಧ ತೆರಿಗೆ ಪದ್ಧತಿ ಇದೆ. ಇದೇ ತರದ ತೆರಿಗೆ ಪದ್ಧತಿಯನ್ನು ಕಾರ್ಪೊರೇಟ್ ಉದ್ದಿಮೆಗಳು ಕೂಡ ನಿರೀಕ್ಷೆ ಮಾಡುತ್ತಿವೆ. ಭಾರತವನ್ನು ಉತ್ಪಾದಕನಾ ಹಾಗೂ ಸೇವಾ ಪೂರೈಕೆದಾರ ಹಬ್‌ಅನ್ನಾಗಿ ಮಾಡಲು ಇದು ಸಹಕಾರಿ ಎನ್ನುವುದು ತಜ್ಞರ ಅಭಿಪ್ರಾಯ. ಜತೆಗೆ ಸದ್ಯ ಇರುವ ಶೇ 30 ರಷ್ಟು ಕಾರ್ಪೊರೇಟ್ ತೆರಿಗೆಯನ್ನು ಶೇ.15ಕ್ಕೆ ಇಳಿಕೆ

5ನೇ ಪುಟಕ್ಕೆ...

# ಬಜೆಟ್ ಸಂಪೂರ್ಣ ವಿವರ ಮೊಬೈಲ್‌ನಲ್ಲಿ ಪಡೆಯಿರಿ




ಕೇಂದ್ರ ಬಜೆಟ್‌ನ ಆ್ಯಪ್ ಅನ್ನು ನಾವು ಅಂಡ್ರಾಯ್ಡ್ ಯೂಸರ್‌ಗಳು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಡೌನ್‌ಲೋಡ್ ಮಾಡಬಹುದು. ಬಳಕೆದಾರರು ಆಪ್ ಸ್ಟೋರ್ ಮೂಲಕ ಕೇಂದ್ರ ಬಜೆಟ್ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತುತ ಈ ಆ್ಯಪ್ ಮೂಲಕ ನಾವು ಬಜೆಟ್ ಮಾಹಿತಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಈ ಮಾಹಿತಿಯನ್ನು ಸರಳವಾಗಿ, ಸುಲಭವಾಗಿ ಪಡೆಯಲು ಸಾಧ್ಯವಾಗಲೆಂದು ಆ್ಯಪ್‌ನಲ್ಲಿ ಬೇರೆ ಬೇರೆ ಭಾಗವಾಗಿ ಮಾಹಿತಿಯನ್ನು ವಿಂಗಡಿಸಲಾಗಿದೆ. ಕೆಲವು ವಿಭಾಗದಲ್ಲಿ ಬಜೆಟ್‌ನ ಮುಖ್ಯಾಂಶಗಳು, ಬಜೆಟ್ ಭಾಷಣ, ವಾರ್ಷಿಕ ಹಣಕಾಸು ಹೇಳಿಕೆ, ರಿಸಿಪ್ಟ್ ಬಜೆಟ್, ವೆಚ್ಚ ಬಜೆಟ್, ಕಸ್ಟಮ್ ಬಜೆಟ್ ಎಂಬ ವಿಂಗಡನೆಗಳನ್ನು ಮಾಡಲಾಗಿದೆ. ಬಜೆಟ್ ಮಾಹಿತಿಯನ್ನು ಪಿಡಿಎಫ್ ಮಾದರಿಯಲ್ಲಿ ಪಡೆಯಲು ಸಾಧ್ಯವಾಗುತ್ತದೆ ಮತ್ತು ಪಿಡಿಎಫ್ ಮಾದರಿಯಲ್ಲಿಯೇ ಡೌನ್‌ಲೋಡ್ ಕೂಡಾ ಮಾಡಿಕೊಳ್ಳಬಹುದು.

ಇಂಗ್ಲೀಷ್ ಹಾಗೂ ಹಿಂದಿಯಲ್ಲಿ ಆ್ಯಪ್ ಇದೆ. ಫೆಬ್ರವರಿ 1 ರಂದು ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ 2023–24ನೇ ಸಾಲಿನ ಬಜೆಟ್ ಅನ್ನು ಮಂಡಿಸಿದ ಬಳಿಕ ಕೇಂದ್ರ ಬಜೆಟ್ ಮೊಬೈಲ್ ಆ್ಯಪ್‌ನಲ್ಲಿ ದಾಖಲೆಯು ಲಭ್ಯವಾಗುವ ಸಾಧ್ಯತೆಯಿದೆ. ಈ ಆ್ಯಪ್‌ನ ಆಂಡ್ರಾಯ್ಡ್ ವರ್ಜನ್ ಅನ್ನು ಕಳೆದ ಬಾರಿ 2022ರ ಜನವರಿ 14ರಂದು ಅಪ್‌ಡೇಟ್ ಮಾಡಲಾಗಿದೆ. ಈ ಆ್ಯಪ್ ಅನ್ನು ಈವರೆಗೆ 1 ಲಕ್ಷಕ್ಕೂ ಅಧಿಕ ಅಂಡ್ರಾಯ್ಡ್ ಬಳಕೆದಾರರು ಡೌನ್‌ಲೋಡ್ ಮಾಡಿಕೊಂಡಿದ್ದಾರೆ.

**ಪೇಪರ್‌ಲೆಸ್ ಬಜೆಟ್ :** 2021–22ರಲ್ಲಿ ಕೊರೊನಾ ಕಾರಣದಿಂದಾಗಿ ಬಜೆಟ್ ಅನ್ನು ಕಾಗದರಹಿತ ಅಥವಾ ಪೇಪರ್‌ಲೆಸ್ ಅನ್ನಾಗಿ ಮಾಡಲಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ಮೊದಲ ಬಾರಿಗೆ ಕಾಗದರಹಿತ ಬಜೆಟ್ ಮಂಡನೆ ಮಾಡಲಾಗಿದೆ. ಕಳೆದ ವರ್ಷವೂ ಬಜೆಟ್ ಡಿಜಿಟಲ್ ಆಗಿತ್ತು, ಈ ವರ್ಷವೂ ಬಜೆಟ್ ಡಿಜಿಟಲ್ ಆಗಿದೆ.

...4ನೇ ಪುಟದಿಂದ

ಮಾಡುವ ನಿರೀಕ್ಷೆ ಈ ವರ್ಗದ್ದು. ಆದರೆ ಇದರ ಸಾಧ್ಯತೆ ಕಡಿಮೆ. ಒಂದು ವೇಳೆ ಕಡಿಮೆ ಮಾಡಿದ್ದೇ ಆದಲ್ಲಿ, ಭಾರತೀಯ ಕಂಪನಿಗಳು ಜಾಗತಿಕ ಸ್ಪರ್ಧೆಯನ್ನು ಎದುರಿಸುವಲ್ಲಿ ಇನ್ನಷ್ಟು ಶಶಕ್ತವಾಗಲಿದೆ.

ಇದರ ಜೆತೆಗೆ ಭಾರತದಲ್ಲಿ ಕೆಲಸ ನಿರ್ವಹಿಸುತ್ತಿರುವ ವಿದೇಶಿ ಕಂಪನಿಗಳು ಕೂಡ ಹಲವು ರಿಯಾಯತಿಗಳನ್ನು ಎದುರು ನೋಡುತ್ತಿವೆ. ಭಾರತದಲ್ಲಿರುವ ಉದ್ಯಮ ಲಾಭದಾಯಕ ಹಾಗೂ ಸ್ಪರ್ಧಾತ್ಮಕವಾಗಿ ಇರಲು ಭಾರತದಲ್ಲಿರುವ ಶಾಖೆಗಳಿಗೆ ರಿಯಾಯತಿ ಸಿಗುವ ನಿರೀಕ್ಷೆಯಲ್ಲಿ ವಿದೇಶಿ ಕಂಪನಿಗಳು ಇವೆ.

**4. ಮನೆ ಖರೀದಿದಾರರಿಗೆ ಹೆಚ್ಚಿನ ರಿಯಾಯತಿ ಸಿಗಲಿದೆಯಾ? :** ರಿಯಲ್‌ಎಸ್ಟೇಟ್ ಕ್ಷೇತ್ರವು ದೇಶದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಈ ವರ್ಷ ಸತತವಾಗಿ ಏರಿಕೆಯಾದ ಬಡ್ಡಿ ದರದಿಂದ ಹೊಸ ಮನೆ ಖರೀದಿ ಮಾಡುವವರ ಉಮೇದು ಕಡಿಮೆ ಮಾಡಿದ್ದಲ್ಲದೇ, ಗೃಹ ಸಾಲ ಪಡೆದವರಿಗೆ ಹೆಚ್ಚಿನ 'ಇಎಂಐ' ಹೊರೆ ಬಿದ್ದಿದೆ. ಹೀಗಾಗಿ ಬಾಡಿಗೆ ಮನೆ ಪಡೆಯುವವರು ಹಾಗೂ ಹೊಸ ಮನೆ ಖರೀದಿ ಮಾಡುವವರು ಹಲವು ನಿರೀಕ್ಷೆಯೊಂದಿಗೆ ಕಾದು ಕುಳಿತಿದ್ದಾರೆ.

ಇದರ ಜತೆಗೆ ಸದ್ಯ ಆದಾಯ ತೆರಿಗೆ ಸೆಕ್ಷನ್24 (ಬಿ) ಅಡಿ ಇರುವ ಗೃಹ ತೆರಿಗೆ ಕ್ರೆಡಿಟ್ ರಿಯಾಯಿತಿ (housing tax credit rebate)ಯನ್ನು ರೂ.2 ಲಕ್ಷದಿಂದ ರೂ.5 ಲಕ್ಷದವರೆಗೆ ಏರಿಕೆ ಮಾಡಬಹುದು ಎಂದು ನಿರೀಕ್ಷೆ ಮಾಡಲಾಗಿದೆ. ಬಡ್ಡಿದರ ಹೆಚ್ಚಳದಿಂದ ಆಗಿರುವ ಸಮಸ್ಯೆಗೆ ಇನ್ನೊಂದು ರೀತಿಯಲ್ಲಿ ಪರಿಹಾರ ಸಿಗಬಹುದು ಎನ್ನುವ ನಿರೀಕ್ಷೆ ಮನೆ ಖರೀದಿದಾರರದ್ದು.

**5. ಸ್ಟಾರ್ಟಪ್‌ಗಳ ನಿರೀಕ್ಷೆ ಏನು? :** ಉದ್ಯೋಗ ಸೃಷ್ಟಿ, ನಾವೀನ್ಯತೆ, ತಂತ್ರಜ್ಞಾನ ಅಭಿವೃದ್ಧಿಯಲ್ಲಿ ಸ್ಟಾರ್ಟಪ್‌ಗಳ ಪಾತ್ರ ಬಹುಮುಖ್ಯವಾದುದು. ಈಗಾಗಲೇ ಸ್ಟಾರ್ಟ್ ಅಪ್‌ಗಳಿಗೆ ಹಲವು ವಿನಾಯಿತಿಗಳು ಇದ್ದರೂ, ನೋಂದಣಿ, ಕ್ಲಿಯರೆನ್ ಮುಂತಾದ ಪ್ರಕ್ರಿಯೆಗಳು ಕ್ಲಿಷ್ಟಕರವಾಗಿವೆ. ಜತೆಗೆ ಸ್ಟಾರ್ಟಪ್‌ಗಳಿಗೆ ಇರುವ ತೆರಿಗೆ ವಿನಾಯಿತಿ ಪಡೆಯುವ ಪ್ರಕ್ರಿಯೆ ಕೂಡ ದೀರ್ಘವಾಗಿದೆ. ಇವುಗಳನ್ನು ಸುಲಭಗೊಳಿಸಿ ಏಕಗವಾಕ್ಷಿ ಸೇವೆಯ ಮೂಲಕ ಎಲ್ಲವೂ ಸಿಗುವಂತೆ ಮಾಡಿದರೆ ಒಳಿತು ಎನ್ನುವುದು ನವ ಉದ್ದಿಮೆಗಳ ಬಯಕೆ. ಇದು ಸಾಧ್ಯವಾದರೆ ಸ್ಟಾರ್ಟಪ್ ನೋಂದಣಿ ಸುಲಭವಾಗಲಿದೆ.

**6. ತಳ ಹಾಗೂ ಮಧ್ಯಮ ವರ್ಗದವರ ನಿರೀಕ್ಷೆ :** ಎಂದಿನಂತೆ ತಳ ಹಾಗೂ ಮಧ್ಯಮ ವರ್ಗದ ಜನ ಕೂಡ ಹಲವು ನಿರೀಕ್ಷೆಯೊಂದಿಗೆ ಈ ಬಜೆಟ್ ಅನ್ನು ಎದುರು ನೋಡುತ್ತಿದ್ದಾರೆ. ಸತತ ಎರಡು ವರ್ಷಗಳ ಕೋವಿಡ್, ಜಾಗತಿಕ ಹಿಂಜರಿತ ಹೊಡೆತದಿಂದ ತಳ ಹಾಗೂ ಮಧ್ಯಮ ಸಮುದಾಯ ಭಾರೀ ಹಿನ್ನಡೆ ಅನುಭವಿಸಿದೆ. ಯುವ ಸಮೂಹ ಕೆಲಸ ಕಳೆದುಕೊಂಡು, ನಿರುದ್ಯೋಗ ಹೆಚ್ಚಳವಾಗಿದೆ. ರೆಪೋ ದರ ಹೆಚ್ಚಳದಿಂದ 'ಇಎಮ್‌ಐ' ಹೊರೆ ಹೆಚ್ಚಳವಾಗಿದೆ. ಹೀಗಾಗಿ ಬಜೆಟ್‌ನಲ್ಲಿ ಉದ್ಯೋಗ ಸೃಷ್ಟಿಗೆ ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ ಎನ್ನುವುದು ಈ ವರ್ಗಗಳ ನಿರೀಕ್ಷೆ.

# 2023-24ರ ಸಾಮಾನ್ಯ ಬಜೆಟ್ ಫೆಬ್ರವರಿ 1 ಕ್ಕೆ ಮಂಡನೆ : ಒಂಬತ್ತು ವರ್ಷಗಳ ನಂತರ ಬದಲಾಗಲಿದೆ ಆದಾಯ ತೆರಿಗೆ ಸ್ಲ್ಯಾಬ್, ಆದಾಯ ಮಿತಿ ರೂ. 5 ಲಕ್ಷಕ್ಕೆ ಏರಿಕೆ ಸಾಧ್ಯತೆ

**2023–24ರ ಸಾಲಿನ ಕೇಂದ್ರ ಬಜೆಟ್ ತಯಾರಿ ಭರದಿಂದ ಸಾಗುತ್ತಿದೆ. ಈ ಬಜೆಟ್‌ನಲ್ಲಿ ತೆರಿಗೆದಾರರು ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ವೈಯಕ್ತಿಕ ಆದಾಯ ತೆರಿಗೆ ಸ್ಲ್ಯಾಬ್‌ನಲ್ಲಿ ಕೊನೆಯ ಬಾರಿ 2014 ರಲ್ಲಿ ಬದಲಾವಣೆ ತರಲಾಗಿತ್ತು. ಇದಾದ ನಂತರ 2.5 ಲಕ್ಷ ರೂಪಾಯಿ ವರೆಗಿನ ವಾರ್ಷಿಕ ಆದಾಯವನ್ನು ತೆರಿಗೆ ಮುಕ್ತಗೊಳಿಸಲಾಯಿತು. ಮೊದಲು ಈ ಮಿತಿ ಎರಡು ಲಕ್ಷ ರೂಪಾಯಿ ಆಗಿತ್ತು.**

**ಹೊಸದಿಲ್ಲಿ :** ತೆರಿಗೆದಾರರಿಗೊಂದು ಸಂತಸದ ಸುದ್ದಿ. ಪ್ರಸ್ತುತ, ವಾರ್ಷಿಕ 2.5 ಲಕ್ಷ ರೂಪಾಯಿವರೆಗಿನ ಆದಾಯದ ಮೇಲೆ ಯಾವುದೇ ಆದಾಯ ತೆರಿಗೆ ಇಲ್ಲ. ಈ ಮಿತಿಯನ್ನು 5 ಲಕ್ಷ ರೂಪಾಯಿಗೆ ಹೆಚ್ಚಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ. ಅಂದರೆ, ನಿಮ್ಮ ವಾರ್ಷಿಕ ಆದಾಯ ಐದು ಲಕ್ಷ ರೂಪಾಯಿಗಳವರೆಗೆ ಇದ್ದರೆ, ನೀವು ಆದಾಯ ತೆರಿಗೆಯನ್ನು ಪಾವತಿಸಬೇಕಾಗಿಲ್ಲ. ಮುಂಬರುವ ಬಜೆಟ್‌ನಲ್ಲಿ ಅದನ್ನು ಘೋಷಿಸುವ ಸಾಧ್ಯತೆ ಇದೆ.

2023–24ರ ಸಾಲಿನ ಬಜೆಟ್ ಮೋದಿ ಸರ್ಕಾರದ ಎರಡನೇ ಅವಧಿಯ ಕೊನೆಯ ಪೂರ್ಣ ಬಜೆಟ್ ಆಗಿದೆ. 2024ರಲ್ಲಿ ದೇಶದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿವೆ. ಅದಕ್ಕಾಗಿಯೇ ಕೇಂದ್ರ ಸರ್ಕಾರವು ತನ್ನ ಕೊನೆಯ ಪೂರ್ಣ ಬಜೆಟ್‌ನಲ್ಲಿ ತೆರಿಗೆದಾರರಿಗೆ ಪರಿಹಾರವನ್ನು ನೀಡಬಹುದು ಎಂದು ನಿರೀಕ್ಷಿಸಲಾಗಿದೆ. 2023–24ನೇ ಹಣಕಾಸು ವರ್ಷದ ಬಜೆಟ್ ಫೆಬ್ರವರಿ 1 ರಂದು ಮಂಡನೆಯಾಗಲಿದೆ. ಈ ಹಿಂದೆ, ವೈಯಕ್ತಿಕ ತೆರಿಗೆ ವಿನಾಯಿತಿ ಮಿತಿಯಲ್ಲಿ ಕೊನೆಯ ಬಾರಿಗೆ 2014ರಲ್ಲಿ ಬದಲಾವಣೆ ಮಾಡಲಾಗಿತ್ತು. ಮೋದಿ ಸರ್ಕಾರದ ಮೊದಲ ಅವಧಿಯ ಮೊದಲ ಬಜೆಟ್ ಮಂಡಿಸುವಾಗ ಆಗಿನ ವಿತ್ತ ಸಚಿವ ಅರುಣ್ ಜೇಟ್ಲಿ ಅವರು ವಾರ್ಷಿಕ ಆದಾಯದ ಮಿತಿಯನ್ನು ರೂ.2 ಲಕ್ಷ ರೂ.ನಿಂದ ರೂ.2.5 ಲಕ್ಷ ರೂ.ಗೆ ಹೆಚ್ಚಳ ಮಾಡಿ ಘೋಷಿಸಿದ್ದರು.

**ಜೀವ ವಿಮೆ ಪ್ರೀಮಿಯಂ ಮೇಲೆ ಆದಾಯ ತೆರಿಗೆಯಲ್ಲಿ ಪ್ರತ್ಯೇಕ ವಿನಾಯಿತಿ ನೀಡಲು ಮನವಿ :** ಎರಡು ವರ್ಷಗಳ ಹಳೆಯ ತೆರಿಗೆ ಪದ್ಧತಿಯಲ್ಲಿ ವೈಯಕ್ತಿಕ ತೆರಿಗೆ ವಿನಾಯಿತಿ ಮಿತಿಯನ್ನು ಹೆಚ್ಚಿಸಲು ಸರ್ಕಾರವು ಪರಿಗಣಿಸುತ್ತಿದೆ ಎಂದು ಸರ್ಕಾರಿ ಮೂಲಗಳನ್ನು ಉಲ್ಲೇಖಿಸಿ ಬಿಸಿನೆಸ್ ಸ್ಟ್ಯಾಂಡರ್ಡ್ ವರದಿ ಹೇಳಿದೆ. ಇದನ್ನು 2.5 ಲಕ್ಷದಿಂದ 5 ಲಕ್ಷಕ್ಕೆ ಹೆಚ್ಚಿಸಬಹುದು. ಇದರಿಂದ ತೆರಿಗೆದಾರರಿಗೆ ನೆಮ್ಮದಿ ಸಿಗಲಿದ್ದು, ಹೂಡಿಕೆಗೆ ಅವರ ಕೈಯಲ್ಲಿ ಹೆಚ್ಚಿನ ಹಣ ಸಿಗಲಿದೆ ಎನ್ನುತ್ತಾರೆ ಅಧಿಕಾರಿಗಳು. ಎರಡು ವರ್ಷಗಳ ಹಿಂದೆಯೇ ಪರ್ಯಾಯ ತೆರಿಗೆ ಪದ್ಧತಿಯನ್ನು ಸರ್ಕಾರ ಘೋಷಿಸಿತ್ತು. ಆದರೆ, ಅದಕ್ಕೆ ಹೆಚ್ಚಿನ ಮನ್ನಣೆ ಸಿಗಲಿಲ್ಲ. ಇದೇ ಕಾರಣಕ್ಕೆ ಜನಪರವಾಗಲು ಸರ್ಕಾರ ಬದಲಾವಣೆ ಮಾಡಲು ಸಿದ್ಧತೆ ನಡೆಸಿದೆ.

**ಹಳೆಯ ಮತ್ತು ಹೊಸ ತೆರಿಗೆ ರಚನೆ :** ಹಳೆಯ ತೆರಿಗೆ ಪದ್ಧತಿಯಲ್ಲಿ, ತೆರಿಗೆದಾರರು 80C ಮತ್ತು 80D ವಿಭಾಗಗಳನ್ನು ಬಳಸಿಕೊಂಡು ತೆರಿಗೆ ಉಳಿಸಬಹುದು. ಆದರೆ ಹೊಸ ವ್ಯವಸ್ಥೆಯಲ್ಲಿ ಇಂತಹ ಹಲವು ವಿನಾಯಿತಿಗಳನ್ನು




ರದ್ದುಪಡಿಸಲಾಗಿದೆ. ಶೇ.10 ರಿಂದ 12ರಷ್ಟು ತೆರಿಗೆದಾರರು ಮಾತ್ರ ಪರ್ಯಾಯ ತೆರಿಗೆ ಪದ್ಧತಿಯನ್ನು ಅಳವಡಿಸಿಕೊಳ್ಳಬಹುದಾಗಿದೆ. ಇದರಲ್ಲಿ 2.5 ಲಕ್ಷ ರೂ. ವರೆಗೆ ತೆರಿಗೆ ಇಲ್ಲ. 2.5 ಲಕ್ಷದಿಂದ 5 ಲಕ್ಷದವರೆಗೆ 5%, 5 ರಿಂದ 7.5 ಲಕ್ಷದವರೆಗೆ 10%, 7.5 ಲಕ್ಷದಿಂದ 10 ಲಕ್ಷದವರೆಗೆ 15%, 10 ರಿಂದ 12.5 ಲಕ್ಷದವರೆಗೆ 20%, 12.5 ಲಕ್ಷದಿಂದ 15 ಲಕ್ಷದವರೆಗೆ 25%, 15 ಲಕ್ಷ ರೂ. ಮೇಲ್ಪಟ್ಟ ವಾರ್ಷಿಕ ಆದಾಯಕ್ಕೆ ಶೇ.30 ತೆರಿಗೆ ವಿಧಿಸಲಾಗುತ್ತದೆ.

ಹೊಸ ತೆರಿಗೆ ವ್ಯವಸ್ಥೆಯನ್ನು ಸುಧಾರಿಸಲು ಸಂಬಂಧಿಸಿದ ಇಲಾಖೆಗಳಿಂದ ಸಲಹೆಗಳನ್ನು ಕೇಳಲಾಗಿದೆ ಎಂದು ಮೂಲಗಳು ಹೇಳುತ್ತವೆ. ತೆರಿಗೆ ಕುರಿತ ಬಜೆಟ್ ಚರ್ಚೆ ಮುಂದಿನ ವಾರ ಆರಂಭವಾಗಲಿದ್ದು, ಹೊಸ ತೆರಿಗೆ ಪದ್ಧತಿಯಲ್ಲಿ ಬದಲಾವಣೆಯಾಗುವ ಸಾಧ್ಯತೆಗಳ ಕುರಿತು ಅದರಲ್ಲಿ ಚರ್ಚಿಸಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅದರ ಆದಾಯದ ಪರಿಣಾಮ ಏನಾಗುತ್ತದೆ ಮತ್ತು ಅದಕ್ಕೆ ವ್ಯಾಪ್ತಿ ಇದೆಯೋ ಇಲ್ಲವೋ ಎಂಬುದನ್ನು ಸಹ ನೋಡಬೇಕು. ಈ ಬಗ್ಗೆ ಕೆಲವು ಗೊಂದಲಗಳಿದ್ದು, ಆರಂಭಿಕ ಮೌಲ್ಯಮಾಪನಗಳು ನಡೆದಿವೆ. ವೈಯಕ್ತಿಕ ಆದಾಯ ತೆರಿಗೆಯಲ್ಲಿನ ಬದಲಾವಣೆಗಳನ್ನು ಹೊಸ ಮತ್ತು ಹಳೆಯ ವ್ಯವಸ್ಥೆಗಳಲ್ಲಿ ಪರಿಗಣಿಸಬಹುದು. 2020–21ರ ಹಣಕಾಸು ವರ್ಷದ ಬಜೆಟ್‌ನಲ್ಲಿ ಪರ್ಯಾಯ ತೆರಿಗೆ ಪದ್ಧತಿ ಘೋಷಿಸಲಾಗಿದೆ. ಇದರಲ್ಲಿ, ತೆರಿಗೆ ದರಗಳನ್ನು ಕಡಿಮೆ ಇರಿಸಲಾಗಿದೆ. ಆದರೆ, ಹಲವು ತೆರಿಗೆ ವಿನಾಯಿತಿಗಳನ್ನು

7ನೇ ಪುಟಕ್ಕೆ...

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್**, ಬ್ಯಾಂಕಿಂಗ್ ಸಲಹೆಗಾರರು.

**1. ಸ್ಥಿರ ಠೇವಣಿ ಹೊಂದಿರುವ ನಮ್ಮ ಒಬ್ಬ ಗ್ರಾಹಕರು ಮೃತಪಟ್ಟಿದ್ದಾರೆ. ಠೇವಣಿಯ ನಾಮಿನಿಯು ವಿದೇಶದಲ್ಲಿದ್ದು ಅವರು ಭಾರತದಲ್ಲಿ ಯಾವುದೇ ಬ್ಯಾಂಕ್ ಖಾತೆಯನ್ನು ಹೊಂದಿರುವುದಿಲ್ಲ. ಹೀಗಿರುವಾಗ, ಠೇವಣಿ ಮೊತ್ತವನ್ನು ನಾಮಿನಿಗೆ ನೀಡುವುದು ಹೇಗೆ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಮಂಗಳೂರು.**

**ಉತ್ತರ :** ಠೇವಣಿಯ ನಾಮಿನಿಯು ನಾನ್ ರೆಸಿಡೆಂಟ್ ಇಂಡಿಯನ್ (ಎನ್‌ಆರ್‌ಐ) ಆಗಿದ್ದಲ್ಲಿ ಠೇವಣಿದಾರರ ನಿಧನದ ನಂತರ ಠೇವಣಿ ಮೊತ್ತವನ್ನು ಯಾವುದೇ ಬ್ಯಾಂಕಿನಲ್ಲಿ ನಾಮಿನಿಯು ಹೊಂದಿರುವ ಎನ್.ಆರ್.ಒ ಖಾತೆಗೆ ರವಾನಿಸಬಹುದು. ನಾಮಿನಿಯು ಭಾರತದಲ್ಲಿ ಎನ್.ಆರ್.ಒ. ಖಾತೆ ಹೊಂದಿಲ್ಲದಿದ್ದಲ್ಲಿ ಠೇವಣಿ ಮೊತ್ತವನ್ನು ಆತನ ಎನ್.ಆರ್.ಇ ಖಾತೆಗಾಗಲಿ ಅಥವಾ ಆತನ ವಿದೇಶದಲ್ಲಿರುವ ಬ್ಯಾಂಕ್ ಖಾತೆಗಾಗಲೀ ರವಾನಿಸುವಂತಿಲ್ಲ. ಠೇವಣಿ ಮೊತ್ತವು ಬ್ಯಾಂಕಿನಲ್ಲಿ ಪ್ರಬುದ್ಧ ಠೇವಣಿಯಾಗಿ ಉಳಿದು ಹತ್ತು ವರ್ಷಗಳ ನಂತರ ಭಾರತೀಯ ರಿಜರ್ವ್ ಬ್ಯಾಂಕಿನಲ್ಲಿರುವ ಠೇವಣಿದಾರರ ಶಿಕ್ಷಣ ನಿಧಿಗೆ ರವಾನಿಸಬೇಕು.

**2. ನಮ್ಮ ಬ್ಯಾಂಕಿನ ಕೆಲವು ಸಾಲಗಾರರು ತಮ್ಮ ಓವರ್‌ಡ್ರಾಫ್ಟ್ / ಕ್ಯಾಷ್‌ಕ್ರೆಡಿಟ್ ಖಾತೆಯಲ್ಲಿ ಕ್ರೆಡಿಟ್ ಬ್ಯಾಲೆನ್ಸ್ ಹೊಂದಿದ್ದಾರೆ. ಈ ಸಾಲದ ಖಾತೆಗಳಿಗೆ ಬ್ಯಾಂಕು ಮೊತ್ತವನ್ನು ಕಾಯ್ದಿರಿಸಬೇಕಲ್ಲದೆ ಕ್ರೆಡಿಟ್ ಬ್ಯಾಲೆನ್ಸ್ ಇದ್ದಲ್ಲಿ ಬ್ಯಾಂಕಿನ ಎನ್.ಡಿ.ಟಿ.ಎಲ್. ಪ್ರಮಾಣ ಮತ್ತು ಸಿ.ಆರ್.ಆರ್ ಪ್ರಮಾಣ ಕೂಡಾ ಜಾಸ್ತಿಯಾಗುತ್ತದೆ. ಇದರಿಂದ ಬ್ಯಾಂಕಿನ ಗಳಿಕೆ ಕ್ಷೀಣಿಸುತ್ತದೆ. ಆದ್ದರಿಂದ, ಕ್ಯಾಷ್‌ಕ್ರೆಡಿಟ್ ಖಾತೆಗಳಲ್ಲಿ ಕ್ರೆಡಿಟ್ ಬ್ಯಾಲೆನ್ಸ್‌ನ ಸಂಖ್ಯೆಯನ್ನು ಕಡಿತಗೊಳಿಸಬಹುದೇ, ಅಥವಾ ಕ್ರೆಡಿಟ್ ಬ್ಯಾಲೆನ್ಸ್‌ನ್ನು ನಿಷೇಧಿಸಬಹುದೇ?**


**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಧಾರವಾಡ ಜಿಲ್ಲೆ.**

**ಉತ್ತರ :** ಓವರ್‌ಡ್ರಾಫ್ಟ್ ಅಥವಾ ಕ್ಯಾಷ್‌ಕ್ರೆಡಿಟ್ ಖಾತೆಗಳಲ್ಲಿರುವ ಕ್ರೆಡಿಟ್ ಬ್ಯಾಲೆನ್ಸ್‌ನ್ನು ಬಡ್ಡಿ ರಹಿತ ಠೇವಣಿಯೆಂದು ಪರಿಗಣಿಸಬೇಕು. ಸಾಲಗಾರರು ತಮ್ಮ ಓವರ್ ಡ್ರಾಫ್ಟ್ / ಕ್ಯಾಷ್ ಕ್ರೆಡಿಟ್ ಖಾತೆಯಲ್ಲಿ ಕ್ರೆಡಿಟ್ ಬ್ಯಾಲೆನ್ಸ್ ಇಡುವುದನ್ನು ನಿಷೇಧಿಸಲು ಸಾಧ್ಯವಿಲ್ಲ. ಇಂತಹ ಸಂದರ್ಭಗಳನ್ನು ಕಡಿಮೆ ಮಾಡಲು ಕಾರ್ಯವಹಿ ಬಂಡವಾಳದ ಮಿತಿಯನ್ನು "ಸಾಲ ಘಟಕ" ಮತ್ತು "ನಗದು ಕ್ರೆಡಿಟ್ ಘಟಕ"ಎಂದು ವಿಂಗಡಿಸಬಹುದು. "ಸಾಲ ಘಟಕ"ಕ್ಕೆ ಬಡ್ಡಿ ದರವನ್ನು ಕಡಿಮೆ ಇರಿಸಿ ಸಾಲಗಾರರು ಹೆಚ್ಚಿನ ಪ್ರಮಾಣದಲ್ಲಿ "ಸಾಲ ಘಟಕ"ವನ್ನು ಪಡೆಯುವಂತೆ ಪ್ರೋತ್ಸಾಹಿಸಬಹುದು. ಇದರಿಂದ ಬ್ಯಾಂಕು ಹೆಚ್ಚಿನ ಪ್ರಮಾಣದ ನಗದನ್ನು ಕಾಯ್ದಿರಿಸುವ ಪ್ರಮೇಯವಿರುವುದಿಲ್ಲ.

## ಭಾರತದ ಶೇ. 1ರಷ್ಟು ಶ್ರೀಮಂತರ ಕೈಲಿದೆ ದೇಶದ ಶೇ.40ಕ್ಕೂ ಹೆಚ್ಚಿನ ಸಂಪತ್ತು

**ನವದೆಹಲಿ :** ದೇಶದಲ್ಲಿರುವ ಶೇ.1 ರಷ್ಟು ಶ್ರೀಮಂತರು ದೇಶದ ಒಟ್ಟು ಸಂಪತ್ತಿನ ಶೇ.40 ರಷ್ಟನ್ನು ಹೊಂದಿದ್ದಾರೆ. ಜನಸಂಖ್ಯೆಯ ಕೆಳಗಿನ ಅರ್ಧದಷ್ಟು ಜನತೆ ಕೇವಲ ಶೇ.3 ರಷ್ಟು ಸಂಪತ್ತು ಹೊಂದಿದ್ದಾರೆ ಎಂದು ಹೊಸ ಅಧ್ಯಯನ ವರದಿಯೊಂದು ಹೇಳಿದೆ.

ಭಾರತದಲ್ಲಿನ ವಾರ್ಷಿಕ ಅಸಮಾನತೆ ವರದಿಯನ್ನು ಪ್ರಕಟಿಸಿರುವ ರೈಟ್ಸ್ ಗ್ರೂಪ್ ಆಕ್ಸ್‌ಫಾಮ್ ಇಂಟರ್ ನ್ಯಾಷನಲ್, ಭಾರತದ 10 ಅತಿ ದೊಡ್ಡ ಶ್ರೀಮಂತರಿಗೆ ಶೇ.5 ರಷ್ಟು ತೆರಿಗೆ ವಿಧಿಸುವುದರಿಂದ ಮಕ್ಕಳನ್ನು ವಾಪಸ್ ಶಾಲೆಗೆ ಕರೆತರಲು ಅಗತ್ಯವಿರುವ ಎಲ್ಲಾ ಹಣವೂ ಲಭಿಸುತ್ತದೆ ಎಂದು ಹೇಳಿದೆ. 2017–2021ರ ಅವಧಿಯಲ್ಲಿ ಚಿನ್ನ ಮತ್ತಿತರ ರೀತಿಯ ಮಾರಾಟ ಮಾಡುವಂತಹ ಸರಕುಗಳಿಂದ ಗಳಿಸಿಕೊಳ್ಳಬಹುದಾದ ಲಾಭವನ್ನು ಪಡೆದು ಕೊಂಡಿರುವುದರ ಮೇಲೆ ಬಿಲಿಯನೇರ್ ಗೌತಮ್ ಅದಾನಿಗೆ ಒಂದು ಬಾರಿ ತೆರಿಗೆ ವಿಧಿಸಿದರೆ ಅದರಿಂದಲೇ 1.79 ಲಕ್ಷ ಕೋಟಿ ರೂಪಾಯಿ ಹಣ ಸಂಗ್ರಹವಾಗುತ್ತಿತ್ತು. ಇದರಿಂದಾಗಿ 5 ಮಿಲಿಯನ್ ಮಂದಿ ಭಾರತೀಯ ಪ್ರಾಥಮಿಕ ಶಿಕ್ಷಕರಿಗೆ ಒಂದು ವರ್ಷದ ಉದ್ಯೋಗ ನೀಡುವುದಕ್ಕೆ ಸಾಧ್ಯವಾಗುತ್ತಿತ್ತು ಎಂದು ಈ ವರದಿ ಹೇಳಿದೆ. ಸರ್ವೈವಲ್ ಆಫ್ ರಿಚೆಸ್ಟ್ ಎಂಬ ಶೀರ್ಷಿಕೆಯಡಿ ಈ ವರದಿ ಪ್ರಕಟವಾಗಿದ್ದು, ಭಾರತೀಯರ ಶ್ರೀಮಂತರ ಒಟ್ಟಾರೆ ಸಂಪತ್ತಿನ ಮೇಲೆ ಒಂದು ಬಾರಿ ಶೇ.2 ರಷ್ಟು ತೆರಿಗೆ ವಿಧಿಸಿದರೆ, ಇಡೀ ದೇಶದಲ್ಲಿರುವ ಅಪೌಷ್ಟಿಕ ಮಕ್ಕಳಿಗೆ ಮುಂದಿನ 3 ವರ್ಷಗಳಿಗೆ ಪೌಷ್ಟಿಕತೆ ಒದಗಿಸಲು ಬೇಕಾಗುವ 40,423 ಕೋಟಿ ರೂಪಾಯಿ ಲಭ್ಯವಾಗುತ್ತದೆ ಎಂದು ವರದಿಯಲ್ಲಿ ಹೇಳಿದೆ.




ಇನ್ನು 10 ಶ್ರೀಮಂತ ಬಿಲಿಯನೇರ್ ಗಳಿಗೆ ಒಮ್ಮೆ ಶೇ.5 ರಷ್ಟು ತೆರಿಗೆ ವಿಧಿಸಿದರೆ (1.37 ಲಕ್ಷ ಕೋಟಿ), ಅದು 2022–23 ಕ್ಕೆ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವಾಲಯ (86,200 ಕೋಟಿ) ಹಾಗೂ ಆಯುಷ್ ಸಚಿವಾಲಯ (3,050 ಕೋಟಿ) ರೂಪಾಯಿಗಳ ಅಂದಾಜಿಗಿಂತಲೂ 1.5 ಪಟ್ಟು ಹೆಚ್ಚಾಗಿರಲಿದೆ ಎಂದು ವರದಿ ಹೇಳಿದೆ.

...6ನೇ ಪುಟದಿಂದ

ರದ್ದುಗೊಳಿಸಲಾಯಿತು.

**ಸಂಬಳ ಪಡೆಯುವವರಿಗೆ ಪ್ರಯೋಜನವಿಲ್ಲ :** ಹೊಸ ತೆರಿಗೆ ಪದ್ಧತಿಯಲ್ಲಿ ಸಂಬಳ ಪಡೆಯುವ ಜನರಿಗೆ ಪ್ರಯೋಜನವಿಲ್ಲ ಎಂದು ತಜ್ಞರು ಹೇಳುತ್ತಾರೆ. ಇದಕ್ಕೆ ಕಾರಣ ಅವರು HRA, LTA, ಸ್ಟ್ಯಾಂಡರ್ಡ್ ಡಿಡಕ್ಷನ್, ಸೆಕ್ಷನ್ 80C ಮತ್ತು ಸೆಕ್ಷನ್ 80D ಅಡಿಯಲ್ಲಿ ಲಭ್ಯವಿರುವ ವಿನಾಯಿತಿಗಳನ್ನು ಪಡೆಯುವುದಿಲ್ಲ. ಆದಾಗ್ಯೂ, ಹೊಸ ತೆರಿಗೆ ಪದ್ಧತಿಯು ಅನಿವಾಸಿಗಳಿಗೆ ಪ್ರಯೋಜನಕಾರಿಯಾಗಿದೆ. ಏಕೆಂದರೆ ಅವರು ಹೆಚ್ಚಾಗಿ ವಿನಾಯಿತಿಯನ್ನು ಪಡೆಯುವುದಿಲ್ಲ. ಹೊಸ ವ್ಯವಸ್ಥೆಯಲ್ಲಿ, ಅನುಸರಣೆಗಳು ಕಡಿಮೆ ಮತ್ತು ರಿಟರ್ನ್ ಫೈಲಿಂಗ್ ತುಂಬಾ ಸುಲಭ. ಭವಿಷ್ಯದ ಉಲ್ಲೇಖಕ್ಕಾಗಿ ದಾಖಲೆಗಳನ್ನು ಸುರಕ್ಷಿತವಾಗಿರಿಸಲು ಯಾವುದೇ ತೊಂದರೆ ಇಲ್ಲ.



## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಜಾಗತಿಕವಾಗಿ ಹಣದುಬ್ಬರ, ಆರ್ಥಿಕ ಹಿಂಜರಿತ ಆತಂಕದ ನಡುವೆ ಹಲವಾರು ಸಂಸ್ಥೆಗಳು ಉದ್ಯೋಗ ಕಡಿತವನ್ನು ಮಾಡುತ್ತಿದೆ. ಟೆಕ್ ದೈತ್ಯ ಗೂಗಲ್ ಕೂಡಾ ಉದ್ಯೋಗ ಕಡಿತ ಘೋಷಿಸಿದೆ. ಜಾಗತಿಕವಾಗಿ 12 ಸಾವಿರ ಮಂದಿಯನ್ನು ಉದ್ಯೋಗದಿಂದ ತೆಗೆದುಹಾಕಲು ಮುಂದಾಗಿದೆ.
- ಉತ್ತರಾಖಂಡ್‌ನ ಜೋಶಿಮಠ ಕುಸಿತದ ಭೀತಿ ಎದುರಿಸುತ್ತಿರುವ ಬೆನ್ನಲ್ಲೇ ಬದ್ರಿನಾಥ ಧಾಮ್‌ಗೆ ಸಂಪರ್ಕ ಕಲ್ಪಿಸುವ ಏಕೈಕ ರಸ್ತೆಯಲ್ಲಿನ ಬಿರುಕು ಮತ್ತಷ್ಟು ಅಗಲಗೊಂಡಿರುವುದು ಆತಂಕವನ್ನು ಹೆಚ್ಚಿಸಿದೆ.
- ಚತ್ತೀಸ್‌ಗಢದ ಕಾಂಗರ್ ವ್ಯಾಲಿ ರಾಷ್ಟ್ರೀಯ ಉದ್ಯಾನವನದಲ್ಲಿ ಪೇಂಟೆಡ್ ಬ್ಯಾಟ್ ಎಂದೇ ಕರೆಸಿಕೊಳ್ಳುವ ಈ ಅಪರೂಪದ ಕಿತ್ತಳೆ ಬಣ್ಣದ ಬಾವಲಿ ಪತ್ತೆಯಾಗಿದೆ.
- ತಿ.ನರಸೀಪುರದ ತಾಲ್ಲೂಕಿನ ಹೊರಳಹಳ್ಳಿ ಗ್ರಾಮದಲ್ಲಿ ಸಂಜೆ ಮನೆಗೆ ತೆರಳುತ್ತಿದ್ದ 11 ವರ್ಷದ ಬಾಲಕ ಜಯಂತ್ ಮೇಲೆ ಚಿರತೆ ದಾಳಿ ಮಾಡಿ ಎಳೆದೊಯ್ದಿದೆ. ಚಿರತೆ ದಾಳಿಯಿಂದ ತಾಲ್ಲೂಕಿನಲ್ಲಿ ಆಗಿರುವ ನಾಲ್ಕನೇ ಬಲಿ ಇದಾಗಿದೆ.
- ಕಾರಿನಲ್ಲಿ ಪ್ರಯಾಣಿಸುವಾಗ ಸಾಮಾಜಿಕ ಮಾಧ್ಯಮಕ್ಕಾಗಿ ವಿಡಿಯೊ ಚಿತ್ರೀಕರಣ ಮಾಡಲು ತಾತ್ಕಾಲಿಕವಾಗಿ ಸೀಟ್ ಬೆಲ್ಟ್ ತೆಗೆದ ಬ್ರಿಟನ್‌ಪ್ರಧಾನಿ ರಿಷಿ ಸುನಕ್ ಅವರಿಗೆ ಪೊಲೀಸರು ದಂಡ ವಿಧಿಸಿದ್ದಾರೆ.
- ನ್ಯೂಜಿಲೆಂಡ್ ನೂತನ ಪ್ರಧಾನಿ ಅಭ್ಯರ್ಥಿಯಾಗಿ 44 ವರ್ಷದ ಕ್ರಿಸ್ ಹಿಪ್ಕಿನ್ಸ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಆಡಳಿತಾರೂಢ ಲೇಬರ ಪಕ್ಷದ ಮೂಲಗಳು ತಿಳಿಸಿವೆ.
- ಬೆಂಗಳೂರಿನ ಸಿ ಟನಲ್ ಅಕ್ವೇರಿಯಂ 24 ಕೋಣೆಗಳು ಇದ್ದು, ದೇಶದಲ್ಲಿನ ಅತಿದೊಡ್ಡ ವಿಲಕ್ಷಣ ಸುರಂಗ ಇದು ಎಂದು ಸಂಘಟಕರು ತಿಳಿಸಿದ್ದಾರೆ. ಇದರಲ್ಲಿ 400 ಕ್ಕೂ ಹೆಚ್ಚು ಜಾತಿಯ ಮೀನುಗಳು ಮತ್ತು 100ಕ್ಕೂ ಹೆಚ್ಚು ಜಾತಿಯ ಸಮುದ್ರ ಜೀವಿಗಳನ್ನು ನೋಡಬಹುದಾಗಿದೆ.
- ಉತ್ತರ ಪ್ರದೇಶದ ಫರೂಕಾಬಾದ್ ಜಿಲ್ಲೆಯ ದುರ್ಗಾಪುರ ಗ್ರಾಮದ ವಧು ರೀತಾ ಸಿಂಗ್, ತಾನು ಮದುವೆಯಾಗುವ ಹುಡುಗನಿಗೆ ಕರೆನ್ಸಿ ನೋಟುಗಳನ್ನು ಎಣಿಸಲು ಬರುತ್ತಿಲ್ಲ ಎಂಬ ನೆಪವೊಡ್ಡಿ ಹಸೆಮಣೆಯಿಂದ ಎದ್ದು ಸೀದಾ ಕೆಳಗೆ ನಡೆದಿದ್ದಾಳೆ.

## ಓದುಗರ ಅನಿಸಿಕೆ...




**ಆರ್ಥಿಕ ತಜ್ಞರು ಬಹು ಹಿಂದೆಯೇ ಹೇಳಿದ್ದರು :** ಕ್ರಿಪ್ಟೋ ಕರೆನ್ಸಿಯನ್ನು ಯಾವುದೇ ಆಧಾರವಾಗಿರುವ ಮೌಲ್ಯವಿಲ್ಲ. ಕ್ರಿಪ್ಟೊ ಕರೆನ್ಸಿ ಮೌಲ್ಯವು ಸಂಪೂರ್ಣವಾಗಿ ಊಹೆಯಲ್ಲದೆ ಬೇರೇನೂ ಅಲ್ಲ. ಅಥವಾ ಬಹಳ ನೇರವಾಗಿ ಹೇಳುವುದಾದರೆ ಅದು ಒಂದು ಜೂಜು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ತಡವಾಗಿ ಹೇಳಿದ್ದಾರಷ್ಟೆ. ಆರ್ಥಿಕ ತಜ್ಞರು ಬಹು ಹಿಂದೆಯೇ ಈ ಬಗ್ಗೆ ಹೇಳಿದ್ದರು.

**ಅರುಣಾಶಂಕರ್, ದಾವಣಗೆರೆ**

**ಹಣಕಾಸು ವಂಚನೆಗೆ ಕಡಿವಾಣ ಬೀಳಬಹುದು :** ಕೇಂದ್ರ ಸರ್ಕಾರ ತೆರಿಗೆ ಮತ್ತು ಬ್ಯಾಂಕಿಂಗ್ ವಂಚನೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಕೆಲವು ಸಂದರ್ಭಗಳಲ್ಲಿ ಗ್ರಾಹಕರ ಮುಖ ಗುರುತಿಸುವಿಕೆ ಮತ್ತು ಐರಿಸ್ ಸ್ಕ್ಯಾನ್ ಬಳಸಿ ನಿರ್ದಿಷ್ಟ ವಾರ್ಷಿಕ ಮಿತಿಯನ್ನು ಮೀರಿದ ವೈಯಕ್ತಿಕ ವಹಿವಾಟುಗಳನ್ನು ಪರಿಶೀಲಿಸಲು ಬ್ಯಾಂಕುಗಳಿಗೆ ಅವಕಾಶ ಕಲ್ಪಿಸಲಿದೆ ಎನ್ನುವ ವರದಿಗಳಿವೆ. ಇದು ನಿಜವಾದಲ್ಲಿ ಎಲ್ಲ ಬಗೆಯ ಹಣಕಾಸು ವಂಚನೆಗೆ ಕಡಿವಾಣ ಬೀಳಬಹುದು.

**ನರಸಿಂಹ ಭಟ್ ಪೇರ್ಲ, ಮಂಗಳೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.